# ಹೀಗೂ ಒಂದು ಕೆಲಸ!

■ ವಿ. ವಿಜಯೇಂದ್ರ ರಾವ್



ಸಾರ್ ನಮಸ್ಕಾರ, ಇಲ್ಲಿ ಯಾವುದೋ ಕೆಲಸ ಖಾಲಿಯಿದೆ ಅಂತ ಹೇಳಿ ಪೇಪರ್‌ನಲ್ಲಿ ಹಾಕಿದ್ರೀ, ಅದು ಇನ್ನೂ ಖಾಲಿ ಇದೆಯಾ?

ಹೌದಪ್ಪ, ಇನ್ನೂ ಖಾಲಿಯಿದೆ, ಬರ್ತೀಯಾ?

ಏನು ಸಾರ್ ಕೆಲಸ?

ಏನಿಲ್ಲಪ್ಪ, ಬೆಳಿಗ್ಗೆ ಎದ್ದೊಡನೆ ಮೊಬೈಲ್ ಆನ್ ಮಾಡಿ, ನೆಟ್ ಕನೆಕ್ಷನ್ ಕೊಡಬೇಕು.

ಸರಿ ಸಾರ್.

ನಾನು ನೂರ ಮೂವತ್ತೇಳು ಗ್ರೂಪಿನಲ್ಲಿ ಮೆಂಬರ್ ಆಗಿದ್ದೇನೆ. ಅದರಲ್ಲಿ ತೊಂಬತ್ತೈದು ಗ್ರೂಪಿನ ಅಡ್ಮಿನ್ ಆಗಿದ್ದೇನೆ.

ಸರಿ ಸಾರ್.

ಒಂದೊಂದು ಗ್ರೂಪಿನೊಳಗೆ ಹೋಗಿ ನೋಡಿ, ಯಾರೂ ಇದುವರೆಗೂ ಪೋಸ್ಟ್ ಮಾಡಿರದ 'ಗುಡ್ ಮಾರ್ನಿಂಗ್', ಪೋಸ್ಟರನ್ನು ಎಲ್ಲಾ ಗ್ರೂಪಿಗೆ ಹಾಕಬೇಕು.

ಸರಿ ಸಾರ್.

ಆಮೇಲೆ ನಿನಗೆ ಯಾವ ಮೆಸೇಜ್ ತುಂಬಾ ಇಷ್ಟವಾಗತ್ತೋ, ಅದನ್ನು ಪಿನ್ ಮಾಡಿಡಬೇಕು.

ಸರಿ ಸಾರ್, ಆಮೇಲೆ ಅದು ಬೇರೆ ಯಾವ ಗ್ರೂಪಿನಲ್ಲೂ ಬಂದಿಲ್ಲ ಅನ್ನೋದನ್ನು ಖಚಿತಪಡಿಸಿಕೊಂಡು, ಅದನ್ನು ಎಲ್ಲಾ ಗ್ರೂಪಿಗೆ ಫಾರ್ವರ್ಡ್ ಮಾಡಬೇಕು.

ಹಲ್ಲುಜ್ಜೋದು, ಕಾಫಿ ಕುಡಿಯೋದು ಎಲ್ಲಾ ಯಾವಾಗ ಸಾರ್?

ನೀನು ಎಲ್ಲಾ ಗ್ರೂಪಿಗೆ ಗುಡ್ ಮಾರ್ನಿಂಗ್ ಕಳಿಸಿದ ಮೇಲೆ, ಅವರು ಗುಡ್ ಮಾರ್ನಿಂಗ್ ಮೆಸೇಜ್ ಹಾಕ್ತಾರಾ ಅಂತ ಕಾಯುವ ಸಮಯದಲ್ಲಿ ನೀನು ಹಲ್ಲುಜ್ಜಿ ಕಾಫಿ ಕುಡಿ.

ಆಮೇಲೆ ಎಷ್ಟು ಜನ ಪ್ರತ್ಯೇಕವಾಗಿ ಗುಡ್ ಮಾರ್ನಿಂಗ್ ಹೇಳ್ತಾರೆ, ಎಷ್ಟು ಜನ ನಾವು ಕಳಿಸಿದ್ದನ್ನೇ ಫಾರ್ವರ್ಡ್ ಮಾಡ್ತಾರೆ ಅನ್ನೋ ಲಿಸ್ಟ್ ಮಾಡು.

ಓ.ಕೆ ಸಾರ್.

ಬೇರೆ ಗ್ರೂಪಿನಲ್ಲಿ ಬಂದ ಚೆನ್ನಾಗಿರುವ ಮೆಸೇಜ್ ಸೆಲೆಕ್ಟ್ ಮಾಡಿ ನನಗೆ ತೋರಿಸು. ನಾನು ಓ.ಕೆ. ಮಾಡಿದ ಮೇಲೆ ನೀನು ಪೋಸ್ಟ್ ಮಾಡಬೇಕು.

ಸ್ನಾನ ಯಾವಾಗ ಮಾಡಿ, ತಿಂಡಿ ತಿನ್ನೋದು ಸಾರ್?

ನಾವು ಮಾಡಿದ ಪೋಸ್ಟನ್ನು ಎಷ್ಟು ಜನರು ನೋಡಿದರು ಎನ್ನುವ ಆ್ಯಪ್ ಒಂದಿದೆ, ಅದರಲ್ಲಿ ಹೋಗಿ ನೋಡುವ ಮುಂಚೆ, ನೀನು ಸ್ನಾನ ಮಾಡಿ, ತಿಂಡಿ ತಿನ್ನಬಹುದು.

ಸರಿ ಸಾರ್.

ಸ್ನಾನ, ತಿಂಡಿಯ ನಂತರ, ನನ್ನ ಒರಿಜಿನಲ್ ಐ.ಡಿ ಇರುವ ಫೇಸ್ ಬುಕ್ ಓಪನ್ ಮಾಡಬೇಕು.

ಸರಿ ಸಾರ್.

ನಿನ್ನೆಯ ನನ್ನ ಪೋಸ್ಟಿಂಗಿಗೆ ಎಷ್ಟು ಜನರು ಲೈಕ್ ಮಾಡಿದ್ದಾರೆ, ಎಷ್ಟು ಜನ ಕಮೆಂಟ್ ಮಾಡಿದ್ದಾರೆ ಅನ್ನುವ ಲಿಸ್ಟ್ ಮಾಡು.

ಸರಿ ಸಾರ್.

ಇದುವರೆಗೂ ಯಾರು ಒಂದು ಸರ್ತಿ ಸಹ ಲೈಕ್ ಮಾಡಿಲ್ಲವೋ ಅವರ ಒಂದು ಲಿಸ್ಟ್ ಮಾಡಿಕೊಡು.

ಸರಿ ಸಾರ್.

ಅವರನ್ನು ನಾನು ನನ್ನ ಲಿಸ್ಟ್‌ನಿಂದ ಡಿಲೀಟ್ ಮಾಡ್ತೀನಿ, ಆಮೇಲೆ ನನ್ನ ಇನ್ನೊಂದು ಐಡಿಯಲ್ಲಿ, ನನ್ನ ವಯಸ್ಸನ್ನು ಹತ್ತು ವರ್ಷ ಕಮ್ಮಿಯಾಗಿ ತೋರಿಸಿದ್ದೇನೆ, ಅದನ್ನು ಓಪನ್ ಮಾಡಿ, ಅದರಲ್ಲಿ ಅವರು ಫ್ರೆಂಡ್ ರಿಕ್ವೆಸ್ಟ್ ಕೊಟ್ಟಿದ್ದಾರಾ ಚೆಕ್ ಮಾಡಬೇಕು

ಸರಿ ಸಾರ್, ಆಮೇಲೆ...?

ಅವರು ಮಾಡಿಲ್ಲದಿದ್ದರೆ, ನಾವೇ ಫ್ರೆಂಡ್ ರಿಕ್ವೆಸ್ಟ್ ಅವರಿಗೆ ಕಳಿಸಬೇಕು.

ಸರಿ, ಊಟ ಯಾವಾಗ ಮಾಡಬೇಕು ಸಾರ್?

ಇನ್ನೊಂದೆರೆಡು, ಮೂರು ಫೇಕ್ ಐ.ಡಿ.ಯಲ್ಲಿ ನಾನು ಮಧ್ಯಾಹ್ನ ಎರಡೂವರೆಯಿಂದ ಮೂರರವರೆಗೆ ಚಾಟ್ ಮಾಡ್ತೀನಿ, ಆಗ ನೀನು ಊಟ ಮಾಡಬಹುದು.

ಊಟದ ನಂತರ ಏನು ಕೆಲಸ ಸಾರ್?

ಮತ್ತೆ ನೀನು ವಾಟ್ಸಪ್ಪಿನಲ್ಲಿ ಬರುವ ಒಳ್ಳೆಯ ಮೆಸೇಜ್‌ಗಳನ್ನು ಪಿನ್ ಮಾಡಿ ಇಡಬೇಕು, ಅದನ್ನು ಕಟ್, ಕಾಪಿ, ಪೇಸ್ಟ್ ಮಾಡಿ, ಫೇಸ್‌ಬುಕ್‌ನಲ್ಲಿ ಹಾಕಬೇಕು.

ಸರಿ ಸಾರ್.

ಆಮೇಲೆ ಮುಖ್ಯವಾದದ್ದು, ನನಗೆ ಇಷ್ಟವಿಲ್ಲದವರಿಗೆ, ಅವರಿಗೆಲ್ಲ ಕೋಪ ಬರುವಂತೆ ಇನ್ನೊಂದು ಐ.ಡಿ ಯಿಂದ ಪೋಸ್ಟ್ ಮಾಡ್ತೀನಿ. ನೀನು ನನ್ನ ಫೇಕ್ ಐಡಿ ಓಪನ್ ಮಾಡಿ, ನನ್ನ ಮೆಸೇಜ್‌ಗಳಿಗೆ ಪ್ರಚೋದಕವಾಗಿ, ಪ್ರತಿ ಉತ್ತರ ಕೊಡುತ್ತಾ ಇದ್ದರೆ, ಅಷ್ಟರಲ್ಲಿ ಸಂಜೆಯಾಗಿ ಬಿಡುತ್ತೆ.

ನಾನು ಆಗ ಮನೆಗೆ ಹೋಗಬಹುದಾ?

ನೀನು ಹೋದರೆ, ಗುಡ್ ಇವ್ನಿಂಗ್ ಮೆಸೇಜ್ ಯಾರು ಹಾಕ್ತಾರೆ?

ಸರಿ, ಇದೆಲ್ಲಾ ಮಾಡಿದರೆ ಸಂಬಳ ಎಷ್ಟು ಕೊಡ್ತೀರಾ ಸಾರ್?

ದಿನಾಲೂ ಸಾವಿರಕ್ಕಿಂತಲೂ ಜಾಸ್ತಿ ಲೈಕ್ ಬಂದರೆ, ತಿಂಗಳಿಗೆ ಹತ್ತು ಸಾವಿರ ರೂಪಾಯಿ. ಐನೂರು ಕಮೆಂಟ್ಸ್ ಒಂದೇ ದಿನ ಬಂದರೆ ಹೆಚ್ಚುವರಿ ಅಲೋಯನ್ಸ್ ಉಂಟು. ದಿನಕ್ಕೆ ಹತ್ತು ಸಾವಿರಕ್ಕೂ ಹೆಚ್ಚು ಪದಗಳನ್ನು ಟೈಪ್ ಮಾಡಿದರೆ, ಫಿಂಗರ್ ಸೇಫ್ಟಿ ಅಲೋಯನ್ಸ್ ಸಹ ಉಂಟು.

ನಾಳೇನೆ ಕೆಲಸಕ್ಕೆ ಸೇರ್ತೀನಿ ಸಾರ್ ಹಾಗಾದರೆ...

ಮರಿಯದೆ, ಒಳ್ಳೆಯ ಗುಡ್ ಮಾರ್ನಿಂಗ್ ಪೋಸ್ಟ್ ಹಾಕಿಬಿಟ್ಟು, ಕೆಲಸಕ್ಕೆ ಬಂದು ಸೇರು...!

ಸದ್ಯ ಈ ಮನುಷ್ಯಂಗೆ ಟ್ವಿಟರ್, ಇನ್‌ಸ್ಟಾಗ್ರಾಂಗಳ ಬಳಕೆ ಇಲ್ಲ ಅನ್ಸುತ್ತೆ ಅಂತ ಅಂದ್ಕೊಂಡು ಸಂತೋಷದಿಂದ ಮನೆಯತ್ತ ನಡೆದ ಆ ನಿರುದ್ಯೋಗಿ ಯುವಕ. ■